**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 2779/2022**

**ಸಾಕ್ಷಿಗೆ ದಿನಾಂಕ 23.9.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಚಯ್ಯ | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ಕರಿಬಸವಯ್ಯ | ಸಿ.ಡಬ್ಲ್ಯೂ-1 |
| ವಯಸ್ಸು | : | 35 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಗುಂಡ್ಲುಪೇಟೆ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸ2 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ದಿನಾಂಕ 20.2.2021 ರಂದು ನಾನು ನಂಜನಗೂಡು ತಾಲ್ಲೂಕಿನ ಹುರ ಗ್ರಾಮದ ಪಕ್ಕದಲ್ಲಿರುವ ಚಿಕ್ಕಚನ್ನಪ್ಪ ದೇವಸ್ಥಾನದಲ್ಲಿ ಕಾರ್ಯಕ್ರಮ ಇದ್ದು ಕಾರ್ಯಕ್ರಮ ಮುಗಿಸಿಕೊಂಡು ನಾನು ಮತ್ತು ಚಾಸ2 ರವರು ಚಾಸ8 ರವರ ಬೈಕಿನಲ್ಲಿ ಕುರ್ಣೆಗಾಲಕ್ಕೆ ಮದ್ಯಾಹ್ನ 3 ಗಂಟೆಯಲ್ಲಿ ಹೋಗುತ್ತಿದ್ದು, ಸದರಿ ಬೈಕನ್ನು ನಾನು ಚಲಾಯಿಸುತ್ತಿದ್ದೆನು. ನಾನು ಚಲಾಯಿಸುತ್ತಿದ್ದ ಬೈಕು ಯಡಿಯಾಲ-ಕುರ್ಣೆಗಾಲ ರಸ್ತೆಯಲ್ಲಿ ಚನ್ನಗುಂಡಿ ಗೇಟ್ ಹತ್ತಿರ ಬಂದಾಗ ಎದರುಗಡೆಯಿಂದ ಒಬ್ಬ ಬೈಕ್ ಸವಾರನು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ನನ್ನ ಬೈಕಿಗೆ ಡಿಕ್ಕಿ ಮಾಡಿರುತ್ತಾನೆ. ಆ ರೀತಿ ಡಿಕ್ಕಿ ಮಾಡಿದ್ದರಿಂದ ನಾನು ಕೆಳಕ್ಕೆ ಬಿದ್ದು ನನ್ನ ಮೂಗಿನ ಮೂಳೆಗಳು ಮುರಿದಿರುತ್ತದೆ. ಚಾಸ2 ರವರ ತಲೆ ಮತ್ತು ಬೆನ್ನಿಗೆ ಪೆಟ್ಟಾಗಿರುತ್ತದೆ. ನಂತರ ಅಪಘಾತ ಮಾಡಿದ ಬೈಕನ್ನು ನೋಡಲಾಗಿ ಅದು ಹೊಸದಾಗಿ ಖರೀದಿಸಿದ ಹೊಂಡ ಶೈನ್ ಬೈಕ್ ಆಗಿದ್ದು, ನಂಬರ್ ಪ್ಲೇಟ್ ಇರಲಿಲ್ಲ. ಬೈಕಿನ ಚಾಸಿಸ್ ನಂಬರ್ ನೋಡಲಾಗಿ ಕೊನೆ ಸಂಖ್ಯೆ 2648 ಆಗಿತ್ತು. ನಂತರ ಸದರಿ ಬೈಕ್ ಚಾಲಕನ ಹೆಸರನ್ನು ಕೇಳಲಾಗಿ ಆತನು ಚನ್ನಗುಂಡಿಯ ರೇವಣ್ಣ ಎಂದು ಗೊತ್ತಾಗಿರುತ್ತದೆ. ನಂತರ ನನ್ನನ್ನು ಹಾಗೂ ಚಾಸ2 ರವರನ್ನು ಸರಗೂರಿನ ವಿವೇಕಾನಂದ ಆಸ್ಪತ್ರೆಗೆ ಅಂಬುಲೆನ್ಸನಲ್ಲಿ ಸ್ಥಳದಲ್ಲಿದ್ದವರು ಕಳುಹಿಸಿಕೊಟ್ಟಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು ಚಿಕಿತ್ಸೆ ಪಡೆದುಕೊಂಡು ಬಂದು ಅಪಘಾತವಾದ 10-12 ದಿನಗಳ ನಂತರ ದೂರನ್ನು ನನ್ನ ಮಾವನಾದ ಚಾಸ6 ರ ಮೂಲಕ ಸರಗೂರು ಠಾಣೆಗೆ

ಕಳುಹಿಸಿರುತ್ತೇನೆ. ನನಗೆ ಶಸ್ತ್ರಚಿಕಿತ್ಸೆಯಾಗಬೇಕಾಗಿದ್ದರಿಂದ ನಾನು ಸ್ವತಃ ದೂರನ್ನು ನೀಡಿರುವುದಿಲ್ಲ ಮತ್ತು ದೂರು ನೀಡಲು ತಡವಾಗಿರುತ್ತದೆ. ಸಾಕ್ಷಿದಾರರು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ಅಪಘಾತವಾದಾಗ ನಮ್ಮನ್ನು ಸದರಿ ರಸ್ತೆಯಲ್ಲಿ ಹೋಗುತ್ತಿದ್ದ ಚಾಸ3 ಮತ್ತು 4 ರವರು ಸುಧಾರಿಸಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಈಗ ನೋಡುತ್ತಿರುವ 4 ಭಾವಚಿತ್ರಗಳಲ್ಲಿರುವ ಬೈಕುಗಳು ಅಪಘಾತಕ್ಕೆ ಸಂಬಂಧಿಸಿದ ಬೈಕುಗಳಾಗಿರುತ್ತವೆ. ಸದರಿ ಭಾವಚಿತ್ರಗಳನ್ನು ನಿಪಿ2 ರಿಂದ ನಿಪಿ5 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಅಪಘಾತ ಮಾಡಿದ ವ್ಯಕ್ತಿಯಾಗಿರುತ್ತಾನೆ.

<u>**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದಃ**</u>

ನಿಪಿ1 ದೂರನ್ನು ನಾನೇ ಬರೆದಿರುತ್ತೇನೆ. ದೂರನ್ನು ಯಾರ ಬಳಿ ಕೇಳಿ ಬರೆದಿರುತ್ತೀರಿ ಎಂದರೆ ಸಾಕ್ಷಿದಾರರು ಅಪಘಾತದ ಬಗ್ಗೆ ವಕೀಲರಿಗೆ ಹೇಳಿದ್ದು ಅವರು ದೂರು ನೀಡಲು ಹೇಳಿದ್ದು ನಾನೇ ದೂರನ್ನು ಬರೆದಿರುತ್ತೇನೆ ಎನ್ನುವರು. ಸದರಿ ವಕೀಲರು ನಮ್ಮ ಊರಿನವರಾಗಿದ್ದು ಅವರ ಹೆಸರು ಸಿದ್ದಯ್ಯ ಆಗಿರುತ್ತದೆ. ಅಪಘಾತವಾದ 12 ದಿನಗಳ ನಂತರ ನಾನು ದೂರನ್ನು ನೀಡಿರುತ್ತೇನೆ. ಅಪಘಾತ ನಡೆದಿದೆ ಎಂದು ಹೇಳುವ ದಿನವೇ ಏಕೆ ದೂರು ನೀಡಿರುವುದಿಲ್ಲ ಎಂದರೆ ಸಾಕ್ಷಿದಾರರು ಗಾಯವಾಗಿದ್ದರಿಂದ ಉಸಿರಾಡಲು ಆಗುತ್ತಿರಲಿಲ್ಲ ಎನ್ನುವರು. ನನಗೆ ಬೈಕ್ ಚಾಲನೆ ಪರವಾನಗಿ ಇರುವುದಿಲ್ಲ. ನಾನು ಚಲಾಯಿಸುತ್ತಿದ್ದ ಬೈಕಿಗೆ ವಿಮೆ ಇತ್ತು. ನಾವು ಮದುವೆ ಮುಗಿಸಿಕೊಂಡು ಹುರ ಗ್ರಾಮ ಬಿಟ್ಟಾಗ ಮದ್ಯಾಹ್ನ 2 ಗಂಟೆಯಾಗಿರಬಹುದು. ಹುರ ಗ್ರಾಮದಿಂದ ಅಪಘಾತವಾಗಿದೆ ಎಂದು ಹೇಳುವ ಸ್ಥಳಕ್ಕೆ 30 ಕಿ.ಮೀ ದೂರ ಇರುತ್ತದೆ. ಹುರ ಗ್ರಾಮದಿಂದ ಸದರಿ ದಿನ ನಾವು ಈರೇಗೌಡನಹುಂಡಿ, ಯಡಿಯಾಲ ಮಾರ್ಗವಾಗಿ ಬಂದಿರುತ್ತೇನೆ. ಅಪಘಾತ ಸ್ಥಳಕ್ಕೆ ಬಂದಾಗ ಮದ್ಯಾಹ್ನ 3.30 ಗಂಟೆಯಾಗಿತ್ತು. ಅಪಘಾತವಾಗಿದ ಎಂದು ಹೇಳುವ ಸ್ಥಳದಲ್ಲಿ 3 ಕಡೆಯಿಂದ ಬಂದು ಸೇರುವ ಸರ್ಕಲ್ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ರಸ್ತೆಯ ಒಂದು ಬದಿಯಲ್ಲಿ ಕಾಲುದಾರಿ ಹೋಗುತ್ತದೆ, ಸರ್ಕಲ್ ಇರುವುದಿಲ್ಲ ಎನ್ನುವರು. ಸದರಿ ಸ್ಥಳದಲ್ಲಿ ಸರ್ಕಲ್ ಇರುತ್ತದೆ ಎಂದರೆ ಸರಿಯಲ್ಲ. ನಾನು ದೂರು ನೀಡಿರುವ ಪ್ರಕಾರ ಆರೋಪಿಯು ರಸ್ತೆಯಲ್ಲಿ ಏರುಮುಖವಾಗಿ ಬರುತ್ತಿದ್ದರು ಎಂದರೆ ಸಾಕ್ಷಿದಾರರು ನಾನು ಏರುಮುಖವಾಗಿ ಹೋಗುತ್ತಿದ್ದೆ, ಅವರು ಇಳಿಜಾರಿನಲ್ಲಿ ಬರುತ್ತಿದ್ದರು ಎನ್ನುವರು. ಆರೋಪಿಯು ಏರುಮುಖವಾಗಿ ಬರುತ್ತಿದ್ದರಿಂದ ನಿಧಾನವಾಗಿ ಬರುತ್ತಿದ್ದರು ಎಂದರೆ ಸಾಕ್ಷಿದಾರರು ಅವರು ಇಳಿಜಾರಿನಲ್ಲಿ ಬರುತ್ತಿದ್ದರು ಎನ್ನುವರು. ಆರೋಪಿಯ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವಾಹನವನ್ನು ಇಂತಿಷ್ಟು ವೇಗವಾಗಿ ಬರುತ್ತಿದೆ ಎಂದು ಹೇಳಲು ಸಾಧ್ಯವಾ ಎಂದರೆ ಸಾಕ್ಷಿದಾರರು ಸದರಿ ಬೈಕ್ ಚಾಲಕನು 60-70 ಕಿ.ಮೀ ವೇಗವಾಗಿ ಬಂದಿರುತ್ತಾರೆ ಎನ್ನುವರು. ಸದರಿ ದಿನ ಆರೋಪಿಯು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಅಪಘಾತ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗಿದೆ ಎಂದು ಹೇಳುವ ಸ್ಥಳದಲ್ಲಿ ಒಂದು ಹಂಪ್ಸ ಮತ್ತು

ಸೇತುವೆ ಇರುತ್ತದೆ ಎಂದರೆ ಸಾಕ್ಷಿದಾರರು ಸದರಿ ಸೇತುವೆ ನಾವು ಬರುತ್ತಿದ್ದ ದಾರಿಯಲ್ಲಿ ಇತ್ತು, ಆರೋಪಿ ಬರುವ ಕಡೆಯಿಂದ ಇರಲಿಲ್ಲ ಮತ್ತು ಅಲ್ಲಿ ಹಂಪ್ಸ ಇರಲಿಲ್ಲ ಎನ್ನುವರು. ಚಾಸ2 ನನ್ನ ಸಂಬಂಧಿಕರು ಎಂದರೆ ಸರಿ. ಚಾಸ3 ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಅವರು ಕುರ್ಣೆಗಾಲ ಗ್ರಾಮದವರು ಎಂದರೆ ಸರಿ. ನಾನು, ಚಾಸ2 ಮತ್ತು 3 ರವರು ಸದರಿ ದಿನ ಬೈಕಿನಲ್ಲಿ ಮೂರು ಜನ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಅಪಘಾತ ಪರಿಹಾರ ಕೋರಿ ಚಾಮರಾಜನಗರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ವಿಮಾ ಕಂಪನಿಯ ಮುಂದೆ ರಾಜಿ ಮಾಡಿಕೊಂಡು ಪರಿಹಾರ ಪಡೆದಿರುತ್ತೇನೆ ಎಂದರೆ ಸರಿ. ಸದರಿ ದಿನ ಆರೋಪಿಯ ತಪ್ಪಿನಿಂದ ಅಪಘಾತವಾಗಿರುವುದಿಲ್ಲ, ಪರಿಹಾರ ಪಡೆಯಲು ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮದ್ಯಪಾನದ ಅಭ್ಯಾಸ ಇರುವುದಿಲ್ಲ. ಸದರಿ ದಿನ ನಾನು, ಚಾಸ2 ಮತ್ತು 3 ರವರು ಮೂರು ಜನ ಬೈಕಿನಲ್ಲಿ ಒಟ್ಟಿಗೆ ಹೋಗಿದ್ದು, ನನಗೆ ಚಾಲನ ಪರವಾನಗಿ ಇಲ್ಲದೇ ನಾನೇ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಹೋಗಿ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ